ಇದರ ಪರಿಣಾಮವು ಶೀಘ್ರದಲ್ಲೇ ಗೋಚರವಾಗತೊಡಗಿತು ಕೂಡ. ಹೇಗೆಂದರೆ ಸಿಕ್ಕಿಬಿದ್ದ ಸಮಯದಲ್ಲಿ ಕೆಲವರು ಆಲ್ಕೋಮೀಟರನ್ನು ತಮ್ಮ ಜನ್ಮಾಂತರದ ವೈರಿಯೇನೋ ಎಂಬಂತೆ ದುರುಗುಟ್ಟುತ್ತಿದ್ದರು. ಆ ತ್ರಿನೇತ್ರನ ಕಣ್ಣೊಳಗಿನ ಅಗ್ನಿವರ್ಷವೇನಾದರೂ ಇವರಿಗಿದ್ದಲ್ಲಿ ಅದನ್ನು ಅಲ್ಲೇ ಮೆಲ್ಟು ಮಾಡಿ ಕರಗಿಸಿಬಿಡುತ್ತಿದ್ದರೇನೋ? ಅಥವಾ ಆ ಬಕಾಸುರನಂತೆ ನುಂಗುವ ತಾಕತ್ತಿದ್ದಲ್ಲಿ ಕಣ್ಣು ಮಿಟುಕಿಸುವುದರೊಳಗೆ 'ಗುಳುಂ' ಅನ್ನಿಸಿಬಿಡುತ್ತಿದ್ದರೇನೋ? ದೇವರ ದಯೆಯಿಂದಲೂ ನಮಗಿದ್ದ ಅದೃಷ್ಟ ಬಲದಿಂದಲೂ ಆ ಶಕ್ತಿ ಅವರಿಗಿರಲಿಲ್ಲವೆನ್ನುವುದೇ ಸಮಾಧಾನ.

ಪ್ರತಿ ವ್ಯಕ್ತಿಗೂ ಬಾಯಿಗಿಟ್ಟು ಪರೀಕ್ಷೆ ಮಾಡುವ ಮುನ್ನ ಆಲ್ಕೋಮೀಟರಿನ ಪೈಪನ್ನು ಬದಲಾಯಿಸಬೇಕಿರುತ್ತದೆ. ಸುರಕ್ಷತೆ ದೃಷ್ಟಿಯಿಂದ ಇದು ಅಗತ್ಯವೂ ಹೌದು. ಇದಕ್ಕೆ ಅಂತಲೇ ಕೆಲವು ಸ್ಟ್ರಾಗಳನ್ನು ಮೊದಲೇ ಕತ್ತರಿಸಿಟ್ಟುಕೊಳ್ಳುತ್ತಿದ್ದೆವು. ಆ ಪೈಪನ್ನು ಬಾಯಿಗಿಟ್ಟಾಗ ಕೆಲವರು ಅದರೊಳಗೆ ಉಸಿರನ್ನೇ ಬಿಡುತ್ತಿರಲಿಲ್ಲ. ಬಾಯೊಳಗೆ ಗಾಳಿಯನ್ನು ತುಂಬಿ ಬಲೂನಿನಂತೆ ಮುಖ ಮಾಡಿ ಸುಮ್ಮನೆ ಇಟ್ಟುಕೊಳ್ಳುತ್ತಿದ್ದರು. 'ಲೋ ಮಾರಾಯಾ ನೀನೇನು ಆಂಜನೇಯನಾ? ಎಷ್ಟು ಹೊತ್ತು ಉಸಿರು ಹಿಡಿದು ನಿಂತ್ಕತೀಯ? ಒಸಿ ಗಾಳಿ ಅದರೊಳಕ್ಕೂ ಬಿಡೋ... ಅಂದರೆ, ಆವಾಗಿಂದ ಊದ್ತಾನೇ ಇದೀನಿ ಕಾಣಾಕಿಲ್ವಾ ಸಾರ್, ಬೇಕಾದ್ರೆ ನೋಡಿ' ಅಂತ ಬಾಯಿ ತೆಗೆದು ಒಳಗಿದ್ದ ಗಾಳಿಯನ್ನೆಲ್ಲ ಬುಸ್ಸನೆ ಸೀದಾ ನಮ್ಮ ಮುಖಕ್ಕೇ ಬಿಡುತ್ತಿದ್ದರು. ಆಲ್ಕೋಹಾಲಿನ ಆ ಘಮಲು ಬಾಯೊಳಗಿನ ಕಮಟು ಸುಗಂಧದೊಡನೆ ಸೇರಿ ಮಿಳಿತಗೊಂಡು ಏಕಕಾಲಕ್ಕೆ ಹೊರಹೊಮ್ಮಿದೊಡನೆ ನಿಂತಲ್ಲೇ ನಮ್ಮ ತಲೆಯು ಒಮ್ಮೆ ಧಿಮ್ಮನೆ ತಿರುಗಿ ಶಿವಾ, ಶಿವಾ ನಮ್ಮದು ಇದೂ ಒಂದು ಬಾಳುವೆಯೇ? ಎಂಬ ಜಿಗುಪ್ಸೆ ಮೂಡಿ ಮರೆಯಾಗುತ್ತಿತ್ತು.

ಕೆಲವರು ಎಷ್ಟು ಚೆನ್ನಾಗಿ ನಟಿಸುತ್ತಿದ್ದರೆಂದರೆ ಆಹಾ, ನಮ್ಮ ಸಿನಿಮಾ ನಟರುಗಳೆಲ್ಲ ಇವರಿಂದಲೂ ಕೊಂಚ ಕಲೆಯನ್ನು ಎರವಲುಪಡೆದರೆ ಚೆನ್ನಿತ್ತಲ್ಲವೆ? ಅನಿಸುತ್ತಿತ್ತು. ನೋಡುತ್ತಿದ್ದರೆ ಪೈಪನ್ನು ಬಾಯಲ್ಲಿ ಇಟ್ಟುಕೊಂಡು ಸಲೀಸಾಗಿ ಊದುತ್ತಿದ್ದಾರೇನೋ ಅನಿಸುತ್ತಿತ್ತು. ಆದರೆ ವಾಸ್ತವದಲ್ಲಿ ಗಾಳಿಯನ್ನು ವಾಪಸ್ ಎಳೆದುಕೊಳ್ಳುತ್ತಿದ್ದರು. ಸವುಂಡು ಮಾತ್ರ ಉಸ್ ಉಸ್ ಅಂತ ಜೋರಾಗಿಯೇ ಕೇಳುತ್ತಿತ್ತು. ಏನು ಮಾಡ್ತಾ ಇದೀಲೇ ಭಡವಾ... ಅಂತ ನಾವೇನಾದರೂ ಗದರಿದೆವೆಂದರೆ ಮತ್ತೊಮ್ಮೆ ಪಿಚಕಾರಿಯಂತೆ ಗಾಳಿಯನ್ನು ಮುಖಕ್ಕೆಲ್ಲಿ ನುಗ್ಗಿಸಿ ಬಿಡುತ್ತಾರೋ ಅಂತ ಹೆದರಿ ಕೇಳಬೇಕಾದ ನಮ್ಮ ಪ್ರಶ್ನೆಯನ್ನೇ ಕಟ್ ಮಾಡಿಕೊಂಡು ಸುಮ್ಮನಾಗುತ್ತಿದ್ದೆವು.

ಇನ್ನು ಕೆಲವರು ಕೋಪಕ್ಕೆ ಆಲ್ಕೋಮೀಟರಿನ ಪೈಪನ್ನೇ ಕಚಕಚನೆ ಜಗಿದುಬಿಡುತ್ತಿದ್ದರು. ಯಾಕಯ್ಯಾ ಹೊಟ್ಟೆಗೇನು ತಿನ್ನಲಿಲ್ಲವೆ... ಅಥವಾ ತಿಂದಿದ್ದು ಸಾಕಾಗಲಿಲ್ಲವೆ? ತಂದ ದುಡ್ಡನ್ನೆಲ್ಲ ಬರೀ ಕುಡಿವುದಕ್ಕೇ ಖರ್ಚು ಮಾಡಿದಿಯೇನು? ಅಂತ ಕೇಳಿದರೆ 'ನಮಗೆ ಊದಾಕೆ ಬರಾವಲ್ಲದು ಸೋಮೀ ಹೆಂಗೆ ಅಂತ ನೀವೆ ಒಸಿ ಹೇಳಿಕೊಡಿ' ಅಂತ ತಮ್ಮ ಎಂಜಲಿನಿಂದ ಪವಿತ್ರಗೊಳಿಸಿದ ಅದೇ ಪೈಪನ್ನು ನಮ್ಮ ಬಾಯಿಗಿಡಲು ಬರುತ್ತಿದ್ದರು.

ಇವರ ನಡುವೆ ಕುಡುಕರಲ್ಲದವರೂ ಸಿಗುತ್ತಿದ್ದರು. ಅವರಿಗೆ ಆಲ್ಕೋಮೀಟರು ಮುಖಕ್ಕೆ ಹಿಡಿದು ಊದಿ ಎಂದರೆ ಸಾಕು, ಇನ್ನಿಲ್ಲದ ಕೋಪ ಬರುತ್ತಿತ್ತು. ಕೆಲವರು ಅಲ್ಲೇ ಉಗ್ರಾವತಾರಿಗಳಾಗಿಬಿಡುತ್ತಿದ್ದರು. 'ಏನ್ರೀ ನಮ್ಮನ್ನು ನೋಡುದ್ರೆ ಕುಡ್ಡೋರಂಗೆ ಕಾಣ್ತೇವಾ... ಜೀವ್ಮಾನದಲ್ಲೇ ಬಾಟ್ಲು ಮುಟ್‌ದೋರಲ್ಲ ನಾವು' ಅಂತ ತಮ್ಮ ಬಗ್ಗೆಯೇ ಸರ್ಟಿಫಿಕೇಟು ಕೊಟ್ಟುಕೊಳ್ಳುತ್ತಿದ್ದುದಲ್ಲದೆ 'ನಮ್ಮಂತೋರ್ನ ಹಿಡೀತಿರಲ್ಲ ಸ್ವಲ್ಪಾನೂ ಸೆನ್ಸು ಇಲ್ವೇನ್ರೀ ನಿಮ್ಗೆ...' ಅಂತ ತಗುಲಿಕೊಳ್ಳುತ್ತಿದ್ದರು. 'ತಪ್ಪು ತಿಳ್ಕಬೇಡಿ ಸ್ವಾಮಿ, ಮುಖ ನೋಡಿ ಕುಡುಕರನ್ನ ಹಿಡಿಯಂಗಿದ್ರೆ